**- 4 -**

**ಸಿ.ಸಿ. ಸಂಖ್ಯೆ 3750 / 2023**
**ಪಿ.ಡಬ್ಲೂ -02**

**ದಿನಾಂಕಃ 21.01.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ ಬಿ ಎಂ ಪಿ . ಆರೋಪಿ ಪರ** ವಕೀಲರಿಂದ **.**

ಏನು ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಎಸ್ ಎಸ್ ಎಲ್ ಸಿ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣಪತ್ರದಲ್ಲಿ ಉದ್ಯೋಗ ವ್ಯವಸಾಯ ಎಂದು ಹೇಳಿದ್ದು ವ್ಯವಸಾಯ ಹೊರತು ಪಡಿಸಿ ಬೇರೆ ಏನು ಕೆಲಸ ಮಾಡುತ್ತೀರಿ ಎಂದರೆ ಸಾಕ್ಷಿ ವ್ಯವಸಾಯ ಮಾತ್ರ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ಬೆಂಗಳೂರಿನಲ್ಲಿ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ಯಾವ ಸ್ಥಳದಲ್ಲಿ ಸದರಿ ಪ್ರಮಾಣಪತ್ರಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ವಕೀಲರ ಕಛೇರಿಯಲ್ಲಿ ಎಂದು ನುಡಿಯುತ್ತಾರೆ. ವಕೀಲರ ಕಛೇರಿ ಎಲ್ಲಿ ಇದೆ ಎಂದರೆ ಸಾಕ್ಷಿಯು ರಾಜಾಜಿನಗರದ 1ನೇ ಬ್ಲಾಕ್ ನಲ್ಲಿ ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ವಕೀಲರ ಹೆಸರು ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಮುಖ್ಯವಿಚಾರಣೆ ಪ್ರಮಾಣಪತ್ರಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ಸುಮಾರು ಎಷ್ಟು ತಿಂಗಳ ಹಿಂದೆ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ 1 ವರ್ಷ ಆಗಿರಬಹುದು ಎಂದು ನುಡಿಯುತ್ತಾರೆ. ನೀವು ವಕೀಲರ ಕಛೇರಿಗೆ ಹೋದಾಗ ಟೈಪ್ ಮಾಡಿ ಇಟ್ಟಿದ್ದರು ಅದಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ನಾವು ಹೋದ ನಂತರ ಟೈಪ್ ಮಾಡಿದ್ದು ಎಂದು ನುಡಿಯುತ್ತಾರೆ. ಸದರಿ ಮುಖ್ಯ ವಿಚಾರಣೆ ಪ್ರಮಾಣಪತ್ರ ಟೈಪ್ ಮಾಡುವ ಎಷ್ಟು ದಿನಗಳ ಮುಂಚೆ ವಕೀಲರ ಜೊತೆ ಚರ್ಚೆ ಮಾಡಿರುತ್ತೀರಿ ಎಂದರೆ ಸಾಕ್ಷಿ 3 ದಿನಗಳ ಮುಂಚೆ ಎಂದು ನುಡಿಯುತ್ತಾರೆ. ಸಾಕ್ಷಿ ಹೇಳಲು ನಿಮಗೆ ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿಯು ಪಿರ್ಯಾದುದಾರರು ಎಂದು ನುಡಿಯುತ್ತಾರೆ.

ಸಾಕ್ಷಿ ಹೇಳಲು ವಿಚಾರವನ್ನು ಪಿರ್ಯಾದುದಾರರು ತಿಳಿಸಿರುತ್ತಾರೋ ಅಥವಾ ವಕೀಲರು ತಿಳಿಸಿರುತ್ತಾರೋ ಎಂದರೆ ಸಾಕ್ಷಿ ಯಾರೂ ಹೇಳಿರುವುದಿಲ್ಲ ನನಗೆ ಏನು ಗೊತ್ತಿರುತ್ತದೆಯೋ ಅದನ್ನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರ ವಕೀಲರು ತಯಾರು ಮಾಡಿಕೊಟ್ಟ ಪ್ರಮಾಣಪತ್ರಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಎರಡೂ ಪ್ರಕರಣಗಳ ಸಾಲದ ವಿಚಾರನ್ನು ಪಿರ್ಯಾದುದಾರರು ಮತ್ತು ಆರೋಪಿಗಳು ತಿಳಿಸಿರುತ್ತಾರೆ ಎಂದು ಹೇಳಿದ್ದು ಪಿರ್ಯಾದುದಾರರು ಯಾವಾಗ ತಿಳಿಸಿರುತ್ತಾರೆ ಹಾಗೂ ಆರೋಪಿಗಳು ಯಾವಾಗ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಪಿರ್ಯಾದುದಾರರು ನಾನು ಊರಿನಲ್ಲಿ ಇದ್ದಾಗ ಯಾವಾಗಲೂ ಹೇಳುತ್ತಿದ್ದರು ಎಂದು ನುಡಿಯುತ್ತಾರೆ, ಆರೋಪಿಗಳು 2025ನೇ ಇಸವಿ ಯಲ್ಲಿ ಹೇಳಿರಬಹುದು ಆದರೆ ದಿನಾಂಕ ತಿಂಗಳು ಮರೆತಿರುತ್ತೇನೆ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರು ಯಾವ ಇಸವಿಯಲ್ಲಿ ಹೇಳುತ್ತಿದ್ದರು ಎಂದರೆ ಸಾಕ್ಷಿ 2022 ಮತ್ತು 2023 ಇಸವಿಯಿಂದಲೂ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಪಿರ್ಯಾದುದಾರರು ಮತ್ತು ಆರೋಪಿಗಳು ಸಾಲದ ವ್ಯವಹಾರದ ಬಗ್ಗೆ ನಿಮ್ಮ ಬಳಿ ಹೇಳಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಯಾವ ದಿನಾಂಕ, ತಿಂಗಳು ಮತ್ತು ಇಸವಿಯಂದು ಬೆಂಗಳೂರಿನ ವಕೀಲರ ಕಛೇರಿಗೆ ಸಾಲದ ವ್ಯವಹಾರದ ಮಾತುಕತೆಗೆ ಹೋಗಿರುತ್ತೇವೆ ಎಂದು ಹೇಳಿದ್ದು ಯಾವಾಗ ಹೋಗಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ ಗೊತ್ತಿರುವುದಿಲ್ಲ ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೋಗಿರುವುದಿಲ್ಲ ಆ ಕಾರಣದಿಂದಲೇ ದಿನಾಂಕ ಮರೆತಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಎಷುಟ ಗಂಟೆಗೆ ವಕೀಲರ ಕಛೇರಿಯಲ್ಲಿ ಮಾತುಕತೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಸಂಜೆ 5.00 ಗಂಟೆಗೆ ಎಂದು ನುಡಿಯುತ್ತಾರೆ. ನಿಪಿ-8ಕ್ಕೆ ನೀವು ಸಹಿಯನ್ನು ಬೆಂಗಳೂರಿನಲ್ಲಿ ಎಲ್ಲಿ ಹಾಗೂ ಯಾವ ದಿನಾಂಕದಂದು ಮತ್ತು

ಎಷ್ಟು ಗಂಟೆಗೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಬೆಂಗಳೂರಿನ ವಕೀಲರ ಕಛೇರಿಯಲ್ಲಿ ಸಂಜೆ 7-00 ಗಂಟೆಗೆ ಸಹಿ ಮಾಡಿರುತ್ತೇನೆ ಆದರೆ ದಿನಾಂಕ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-8ಕ್ಕೆ ನೀವು ಬೆಂಗಳೂರಿನಲ್ಲಿ ಸಹಿ ಹಾಕಿರುವುದಿಲ್ಲ ನಿಮ್ಮ ಊರಾದ ಮಾಗಡಿಯಲ್ಲಿ ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪಿರ್ಯಾದುದಾರರು ನಿಪಿ-8ರ ಖರೀದಿ ಮಾಡಿದ ಸ್ಟಾಂಪ್ ಪೇಪರ್ ನ ಖಾಲಿ ಹಾಳೆಗೆ ನಿಮ್ಮ ಸಹಿಯನ್ನು ಪಡೆದು ಬೆಂಗಳೂರಿಡಿಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೇ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಖಾಲಿ ಹಾಳೆಗೆ ಸಹಿ ಮಾಡಿರುವುದರಿಂದ ಯಾವ ದಿನಾಂಕದಂದು ಸದರಿ ಲೋನ್ ಅಗ್ರಿಮೆಂಟ್ ಆಗಿರುತ್ತದೆ ಎಂದು ನಿಮಗೆ ಹೇಳಲು ಬರುತ್ತಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳುವಂತೆ ಆರೋಪಿಗಳು ಪಿರ್ಯಾದುದಾರರರಿಗೆ ಯಾವುದೇ ಹಣಕಾಸಿನ ವ್ಯವಹಾರವನ್ನು ಕೊಡವುದು ಇುವುದಿಲ್ಲ ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೆಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಪಿರ್ಯಾದುದಾರರಿಂದ ಹಣ ಪಡೆದಿರುತ್ತಾರೆ ಎಂದು ಹೇಳಿದ್ದು ಸದರಿ ಹಣವನ್ನು ಪಡೆಯುವ ಸಮಯದಲ್ಲಿ ನೀವು ಇದ್ದಿರಲಿಲ್ಲ ಹಾಗೂ ನೀವು ಸಹಿ ಹಾಕಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-8 ರಲ್ಲಿ ಬರೆದಿರುವ ವಿಚಾರಗಳು ನಿಮಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ ಪಿರ್ಯಾದುದಾರರು ಮತ್ತು ವಕೀಲರು ನಿವುಗೆ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಸಮಕ್ಷಮ ಹಣ ಕೊಟ್ಟಿರುವುದಿಲ್ಲ ಆದರೆ ಪಿರ್ಯಾದುದಾರರು ಮತ್ತು ಆರೋಪಿಗಳು ನನ್ನ ಸಮಕ್ಷಮ ಹಣ ಕೊಡಬೇಕು ಎಂದು ಒಪ್ಪಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋೀಪಿಗಳು ಪಿರ್ಯಾದುದಾರರಿಗೆ ಹಣ ಕೊಡಬೇಕು ಎಂದು ನಿಮ್ಮ ಸಮಕ್ಷಮ ಹೇಳಿರುವುದಿಲ್ಲ , ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ , ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಗ್ರಿಮೆಂಟ್ ಸಮಯದಲ್ಲಿ ಚೆಕ್ ಕೊಟ್ಟಿರುತ್ತಾರೆ ಎಂದು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿದ್ದು ಸದರಿ ಚೆಕ್ ನಲ್ಲಿ ಯಾವ ದಿನಾಂಕ ನಮೂದು ಮಾಡಿದ್ದರು ಹಾಗೂ ಎಷ್ಟು ಹಣ ನಮೂದು ಮಾಡಿದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಚೆಕ್ಕುಗಳಲ್ಲಿ ಏನಾದರೂ ಬರೆದಿತ್ತ ಅಥವಾ ಖಾಲಿ ಇತ್ತ ಎಂದರೆ ಸಾಕ್ಷಿ ಬರೆದಿತ್ತು ಎಂದು ನುಡಿಯುತ್ತಾರೆ. ಅಗ್ರಿಮೆಂಟ್ ನಲ್ಲಿ ಏನೆಲ್ಲಾ ಬರೆದಿರುತ್ತದೆ ಎಂದು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಚೆಕ್ ಡೀಟೇಲ್ಸ್ ಅನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಚೆಕ್ ಅನ್ನು ನೋಡಿರದ ಕಾರಣ ಹೇಳಲು ಆಗುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಆದರೆ ನನ್ನ ಸಮಕ್ಷಮ ಚೆಕ್ ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

ಆರೋಪಿಯು ಅಗ್ರಿಮೆಂಟ್ ಸಮಯದಲ್ಲಿ ಅವರ ಸ್ವತ್ತಿನ ದಾಖಲೆ ಯನ್ನು ಶ್ಯೂರಿಟಿಯಾಗಿ ಕೊಟ್ಟಿರುತ್ತಾರೆ ಎಂದು ಹೇಳಿದ್ದು ಸದರಿ ಸ್ವತ್ತು ಏನು ಎಂದರೆ ಸಾಕ್ಷಿ ಮೈಸೂರಿನಲ್ಲಿ ರುವ ನಿವೇಶನ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ವಿಳಾಸ ಮತ್ತು ಚೆಕ್ಕುಬಂಧಿ ಗೊತ್ತಿದೆಯೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ದಾಖಲೆಯ ಮೇಲೆ ಸಾಲವನ್ನು ಕೊಡುತ್ತೇನೆ ಎಂದು ವಿನಯ್ ರವರು ಹೇಳಿದ್ದರು ಆ ಬಗ್ಗೆ ನಿಮಗೆ ಗೊತ್ತಿದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**